SEPTEMBER 21, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

<><><>

- **ಸೇವಾ ಪರ್ವ; ಸೇವೆ ಮತ್ತು ಸುಶಾಸನ** ಧ್ಯೇಯದೊಂದಿಗೆ, ಪರಿವರ್ತನೆ ಹಾಗೂ ಪ್ರಗತಿ ಸಾಧನೆಗೆ, ಕೇಂದ್ರದ ಸಂಕಲ್ಪ.
- **ಸರಕು ಮತ್ತು ಸೇವಾ ತೆರಿಗೆ ಪರಿಷ್ಕರಣೆ;** ಹವಾನಿಯಂತ್ರಕ ಹಾಗೂ ಟೆಲಿವಿಷನ್ ಮೇಲಿನ, ತೆರಿಗೆ ಕಡಿತಕ್ಕೆ ಶಿಫಾರಸು.
- **'ಸಖಿ ಒನ್ ಸ್ಟಾಪ್ ಸೆಂಟರ್';** ದೌರ್ಜನ್ಯಕ್ಕೀಡಾದ ಮಹಿಳೆಯರಿಗೆ, ಒಂದೇ ಸೂರಿನಡಿ, ಸಕಾಲಿಕ ನೆರವು.
- **'ಮಿಷನ್ ವಾತ್ಸಲ್ಯ';** ಸಹಾಯವಾಣಿ 1–0–9–8 ಮೂಲಕ, ಸಂಕಷ್ಟದಲ್ಲಿರುವ ಮಕ್ಕಳ ಹಿತರಕ್ಷಣೆ.

<><><>

**ಈಗ ವಾರ್ತೆಗಳ ವಿವರ**

<><><>

**ಸೇವಾ ಪರ್ವ ಆಚರಣೆ ಹಿನ್ನೆಲೆ,** ಸೇವಾ ಪಾಕ್ಷಿಕವನ್ನು, ವಿಜಯನಗರ ಜಿಲ್ಲೆಯಾದ್ಯಂತ, ಬಿಜೆಪಿ ಜಿಲ್ಲಾ ಘಟಕ ಅರ್ಥಪೂರ್ಣವಾಗಿ ಆಯೋಜಿಸಿದೆ. ಉಚಿತ ಆರೋಗ್ಯ ತಪಾಸಣೆ ಶಿಬಿರ, ರಕ್ತದಾನ ಶಿಬಿರ ಹಾಗೂ ಸ್ವಚ್ಛತಾ ಜನಾಂದೋಲನಗಳನ್ನು ಯಶಸ್ವಿಯಾಗಿ ಆಯೋಜಿಸಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, 75ನೇ ವರ್ಷದ ಜನ್ಮದಿನಾಚರಣೆ, ಕೈಗೊಳ್ಳಲಾಗಿದೆ. ಹೊಸಪೇಟೆಯ, ಸ್ವಾತಂತ್ರ್ಯೋದ್ಯಾನದಲ್ಲಿ, ವಿವಿಧ ಸಂಘಟನೆಗಳ ಸಹಭಾಗಿತ್ವದಲ್ಲಿ, ನಮೋ ಮ್ಯಾರಾಥಾನ್ ಜರುಗಿತು.

<><><>

**ಕಾರವಾರದ, ರವೀಂದ್ರನಾಥ** ಟ್ಯಾಗೋರ್ ಕಡಲ ತೀರದಲ್ಲಿ,ಹಾಗೂ ಸಾಲು ಮರದ ತಿಮ್ಮಕ್ಕ ಉದ್ಯಾನದಲ್ಲಿ, ಸೇವಾ ಪರ್ವದ ಅಂಗವಾಗಿ, 'ಸ್ವಚ್ಛತಾ ಹೀ ಸೇವಾ' ಕಾರ್ಯಕ್ರಮ ಜರುಗಿತು. ಅಂತಾರಾಷ್ಟ್ರೀಯ ಕಡಲ ತೀರ ಸ್ವಚ್ಛತಾ ದಿನ ಹಾಗೂ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, 75ನೇ ಜನ್ಮ ದಿನಾಚರಣೆ ಹಿನ್ನೆಲೆ, ಸೇವಾ ಪಾಕ್ಷಿಕ, ಉತ್ತರಕನ್ನಡ ಜಿಲ್ಲೆಯಾದ್ಯಂತ ಆಯೋಜಿತವಾಗಿದೆ.

<><><>

**ಧ್ಯೇಯ ಸಂಗೀತ 10 ಸೆಕೆಂದುಗಳು**

<><><>

**ಸೇವೆ ಮತ್ತು ಸುಶಾಸನ ಧ್ಯೇಯದೊಂದಿಗೆ,** ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಸೇವಾ ಪರ್ವದ ಮೂಲಕ, ಪರಿವರ್ತನೆ ಹಾಗೂ ಪ್ರಗತಿಯನ್ನು ಸಾಧಿಸಲು, ಶ್ರಮಿಸುತ್ತಿದೆ.

<><><>

**ಕಳೆದ 11 ವರ್ಷಗಳಲ್ಲಿ, ಮಧ್ಯಮ ವರ್ಗದ** ಜನರ ಅನುಕೂಲಕ್ಕಾಗಿ, ತೆರಿಗೆ ಸುಧಾರಣೆ, ವಾರ್ಷಿಕ 12 ಲಕ್ಷ ರೂಪಾಯಿ ವರೆಗೆ ಯಾವುದೇ ಆದಾಯ ತೆರಿಗೆ ಪಾವತಿಯಿಂದ ವಿನಾಯಿತಿ, ಸುಲಭ ಹಾಗೂ ಸರಳವಾದ ತೆರಿಗೆ ಅನುಸರಣೆ, ರಿಟರ್ನ್ಸ್ ಫೈಲಿಂಗ್, ಹಾಗೂ ಏಕೀಕೃತ ಪಿಂಚಣಿ ಯೋಜನೆಯಿಂದ, 25 ವರ್ಷ ಸೇವಾ ಅವಧಿ ಪೂರ್ಣಗೊಳಿಸಿದವರಿಗೆ, ಸರಾಸರಿ ಮೂಲ ವೇತನದ, ಶೇಕಡ 50ರಷ್ಟು ಖಚಿತ ಪಿಂಚಣಿ, ತನ್ಮೂಲಕ, 23 ಲಕ್ಷ ಕೇಂದ್ರ ಸರ್ಕಾರಿ ಉದ್ಯೋಗಿಗಳಿಗೆ ಪ್ರಯೋಜನ..

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ,** ಈ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದು, ಹೀಗೆ.....

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ – 33 ಸೆಕೆಂದುಗಳು**

<><><>

**ಕೇಂದ್ರ ಪುರಸ್ಕೃತ, "ಮಿ ’ನ್ ಶಕ್ತಿ"** ಯೋಜನೆ ಅಡಿ ಸ್ಥಾಪಿಸಲಾದ, ಸಖಿ ಒನ್ ಸ್ಟಾಪ್ ಸೆಂಟರ್, ದೌರ್ಜನ್ಯಕ್ಕೀಡಾದ ಮಹಿಳೆಯರಿಗೆ, ಒಂದೇ ಸೂರಿನಡಿ, ಆಪ್ತ ಸಮಾಲೋಚನೆ, ವೈದ್ಯಕೀಯ ಚಿಕಿತ್ಸೆ, ಕಾನೂನು ಹಾಗೂ ಪೊಲೀಸ್ ನೆರವು ಮತ್ತು ತಾತ್ಕಾಲಿಕ ವಸತಿ ಸೌಲಭ್ಯ ಒದಗಿಸುತ್ತದೆ ಎಂದು, ಕಲಬುರಗಿ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ತಿಳಿಸಿದ್ದಾರೆ. ಕಲಬುರಗಿಯ ಪ್ರಗತಿ ಕಾಲೋನಿಯ, ಒನ್ ಸ್ಟಾಪ್ ಸಖೀ ಸೆಂಟರ್‌ಗೆ ಭೇಟಿ ನೀಡಿ, ಅವರು ಪರಿಶೀಲಿಸಿದರು. ಕೇಂದ್ರ ಸರ್ಕಾರದ ಪೋ ’ಣ್ ಅಭಿಯಾನದಡಿ, ಸಖಿ ಕೇಂದ್ರಕ್ಕೆ, ಸ್ಮಾರ್ಟ್ ಫೋನ್ ಹಾಗೂ ಎರಡು ವಾಹನಗಳನ್ನು, ಜಿಲ್ಲಾಧಿಕಾರಿ ಒದಗಿಸಿದರು.

<><><>

**ಅಗತ್ಯವುಳ್ಳ ಮಕ್ಕಳ ಹಕ್ಕುಗಳ** ರಕ್ಷಣೆಗಾಗಿ, 'ಮಿಷನ್ ವಾತ್ಸಲ್ಯ' ಯೋಜನೆ ಜಾರಿಗೊಂಡಿದ್ದು, ಸಂಕಷ್ಟದಲ್ಲಿರುವ ಹಾಗೂ ಸವಾಲು ಎದುರಿಸುತ್ತಿರುವ ಮಕ್ಕಳ ಹಿತರಕ್ಷಣೆಗೆ ಒತ್ತು ನೀಡುತ್ತದೆ ಎಂದು, ರಾಜ್ಯ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ತಿಳಿಸಿದ್ದಾರೆ. ರಾಜ್ಯದ ಎಲ್ಲ ಸರ್ಕಾರಿ, ಅರೆ ಸರ್ಕಾರಿ ಹಾಗೂ ಸೇವಾ ಸಂಸ್ಥೆಗಳ ಮಾಹಿತಿ ಫಲಕದ ಮೇಲೆ, ಮಕ್ಕಳ ಸಹಾಯವಾಣಿ ಸಂಖ್ಯೆ 1098 ನ್ನು ಕಡ್ಡಾಯವಾಗಿ ನಮೂದಿಸುವಂತೆ ನಿರ್ದೇಶಿಸಿದ್ದಾರೆ.

ಬಾಲ್ಯ ವಿವಾಹ, ಬಾಲ ಗರ್ಭಿಣಿಯರು ಹಾಗೂ ಬಾಲ ಮತ್ತು ಕಿಶೋರ ಕಾರ್ಮಿಕ ಮಕ್ಕಳು, ಕಾನೂನು ಸಂಘರ್ಷಕ್ಕೀಡಾದ ಮಕ್ಕಳ ರಕ್ಷಣೆಗೆ, ಎಲ್ಲ ಇಲಾಖೆಗಳು ಪರಸ್ಪರ ಸಹಕಾರದಿಂದ ಕಾರ್ಯ ನಿರ್ವಹಿಸುವಂತೆ ಸೂಚಿಸಿದ್ದಾರೆ.

<><><>

**ಕಳಸಾ–ಬಂಡೂರಿ ಹಾಗೂ ಮಹಾದಾಯಿ** ನದಿ ಜೋಡಣೆ ಯೋಜನೆಗೆ, ಗೋವಾ ಸರ್ಕಾರ ಸಹಕರಿಸಬೇಕು. ಅಭಿವೃದ್ಧಿ ಹಾಗೂ ಮೂಲಸೌಕರ್ಯ ವಿಚಾರದಲ್ಲಿ, ನೆರೆಯ ರಾಜ್ಯಗಳು, ಪರಸ್ಪರ ಔದಾರ್ಯದಿಂದ ನಡೆದು ಕೊಳ್ಳಬೇಕು ಎಂದು, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ, ಗೋವಾ ಅರಣ್ಯ ಖಾತೆ ಸಚಿವ ವಿ.ಪಿ. ರಾಣೆ ಅವರಿಗೆ ಕೋರಿದ್ದಾರೆ. ಬೆಂಗಳೂರಿನ ವಿಕಾಸಸೌಧದಲ್ಲಿ, ಸಚಿವರೊಂದಿಗೆ ಸಭೆ ನಡೆಸಿದರು. ಕರ್ನಾಟಕ ಮತ್ತು ಗೋವಾ ರಾಜ್ಯಗಳ ನಡುವೆ, ಉತ್ತಮ ಸಹಕಾರ ಮತ್ತು ಬಾಂಧವ್ಯವನ್ನು, ಬಲ ಪಡಿಸಲು, ತಮ್ಮ ಸರ್ಕಾರ ಬದ್ಧವಾಗಿದೆ ಎಂದರು.

<><><>

**ಈಗ ಪ್ರಕಟಣೆ,**
**ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**
**(43 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_Kannada ಹಾಗೂ**

**ನಮ್ಮ ಫೇಸ್ಬುಕ್ ಖಾತೆ Akashvani RNU Bengaluru-Dharwad ಅನುಸರಿಸಿ.**

<><><>

**ಸರಕು ಮತ್ತು ಸೇವಾ ತೆರಿಗೆ,** ಕೇಂದ್ರ ಮಂಡಳಿಯ, 56ನೇ ಸಭೆ ಶಿಫಾರಸಿನಂತೆ, ಪರಿಷ್ಕೃತ ದರಗಳು, ನಾಳೆ 22ನೇ ತಾರೀಖು, ನವರಾತ್ರಿಯ ಮೊದಲ ದಿನದಿಂದ, ದೇಶಾದ್ಯಂತ ಜಾರಿಗೊಳ್ಳಲಿವೆ. ಎರಡನೇ ಆವೃತ್ತಿಯ ಪರಿಷ್ಕರಣೆಯಲ್ಲಿ, ಹವಾನಿಯಂತ್ರಕಗಳು, ಟೆಲಿವಿಷನ್, ಮರುಬಳಕೆ ಇಂಧನ ಮೂಲಗಳ ಪರಿಕರಗಳ ತೆರಿಗೆಯನ್ನು, ಕಡಿತ ಗೊಳಿಸಲಾಗಿದೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ, ಧಾರವಾಡದ, ವಿಜಯಕುಮಾರ ಪಂಚಪ್ಪ ಚಾರ್ಟರ್ಡ್ ಅಕೌಂಟಂಟ್ಸ್ ಫರ್ಮ್ ನ ಚಾರ್ಟರ್ಡ್ ಅಕೌಟಂಟ್ ವೀಣಾ ಸಿದ್ದು ಬೆಟಗೇರಿ.

<><><>

**ವೀಣಾ ಬೆಟಗೇರಿ ಧ್ವನಿ 55 ಸೆಕೆಂದುಗಳು**

<><><>

**ಈ ತಿಂಗಳ** 19 ನೇ ತಾರೀಖು, ಅಂತಾರಾಷ್ಟ್ರೀಯ ಹಾವು ಕಡಿತದ ಜಾಗೃತಿ ದಿನವನ್ನಾಗಿ, ವಿಶ್ವ ಆರೋಗ್ಯ ಸಂಸ್ಥೆ, ಅಧಿಕೃತವಾಗಿ ಘೋಷಿಸಿದೆ. ತನ್ನಿಮಿತ್ತ, ವಿಷಕಾರಿ ಹಾವುಗಳ ಕಡಿತದಿಂದ ಸಂಭವಿಸುವ ಅಕಾಲಿಕ ಸಾವು, ಉಂಟಾಗಬಹುದಾದ, ಶಾಶ್ವತ ಅಂಗವೈಕಲ್ಯದ ಕುರಿತು, ಜಾಗ್ರತಿ ಕಾರ್ಯಕ್ರಮ, ಧಾರವಾಡದ, ಪ್ರಥಮ ದರ್ಜೆ ಸರ್ಕಾರಿ ಪದವಿ ಮಹಾವಿದ್ಯಾಲಯದಲ್ಲಿ ಜರುಗಿತು. ಭಾರತದಲ್ಲಿ ಪ್ರತಿ ವರ್ಷ 58 ಸಾವಿರ ಜನ ವಿಷಕಾರಿ ಹಾವುಗಳ ಕಡಿತದಿಂದ ಸಾವನ್ನಪ್ಪುತ್ತಿದ್ದು, 4 ಲಕ್ಷ ಜನ ಶಾಶ್ವತ ಅಂಗವೈಕಲ್ಯಕ್ಕೆ ಒಳಗಾಗುತ್ತಿದ್ದಾರೆ ಎಂದು, ಪರಿಣಿತರು ಅಭಿಪ್ರಾಯಪಟ್ಟರು.

<><><>

**ಧಾರವಾಡದ, ಕರ್ನಾಟಕ ವಿಶ್ವವಿದ್ಯಾಲಯದ,** ಸ್ನಾತಕೋತ್ತರ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗದ, ಹಿರಿಯ ಪ್ರಾಣಿ ಶಾಸ್ತ್ರಜ್ಞ, ಡಾಕ್ಟರ್ ಧೀರಜ ವೀರನಗೌಡರ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

**ಡಾಕ್ಟರ್ ಧೀರಜ್ ವೀರನಗೌಡರ ಧ್ವನಿ 55 ಸೆಕೆಂದುಗಳು**

<><><>

**ಮಹಿಳೆಯರ ಸಶಕ್ತೀಕರಣದಿಂದ,** ಇಡೀ ರಾಷ್ಟ್ರ ಸಬಲಗೊಳ್ಳುತ್ತದೆ ಎಂದು, ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಅನು ಶಿವರಾಮನ್ ಅಭಿಪ್ರಾಯಪಟ್ಟಿದ್ದಾರೆ.

ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರಿನಲ್ಲಿ ಆಯೋಜಿಸಿದ್ದ, "ಮಹಿಳಾ ಸಬಲೀಕರಣ; ಕಾನೂನು ಅರಿವು" ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು. ಬೆಂಗಳೂರು ನಗರ ಜಿಲ್ಲೆ ನ್ಯಾಯಾಧೀಶ ಎಚ್.ಶಶಿಧರ ಶೆಟ್ಟಿ ಮಾತನಾಡಿ, ಮಹಿಳೆಯರು ಕಾನೂನು ಅರಿವು ಹೊಂದಿದ್ದಲ್ಲಿ, ತಮ್ಮ ಮೇಲಾಗುವ ದೌರ್ಜನ್ಯಗಳನ್ನು ತಡೆಯಲು ಸಾಧ್ಯ ಎಂದರು.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು,** ಈ ತಿಂಗಳ 28ನೇ ತಾರೀಖು, ಕೊನೆ ಭಾನುವಾರದಂದು, 11 ಗಂಟೆಗೆ, 'ಮನ್ ಕೀ ಬಾತ್' ನಲ್ಲಿ, ಆಕಾಶವಾಣಿ ಮೂಲಕ, ದೇಶ, ವಿದೇಶಗಳ ಭಾರತೀಯರೊಂದಿಗೆ ತಮ್ಮ ಅನಿಸಿಕೆ ಹಂಚಿಕೊಳ್ಳಲಿದ್ದಾರೆ. ಇದು ಮನದ ಮಾತಿನ 126ನೇ ಆವೃತ್ತಿಯಾಗಿದೆ. ನಮೋ ಆಪ್, My Gov.in ಜಾಲತಾಣ, ಅಥವಾ 1800-11-7800 ಗೆ ಕರೆ ಮಾಡಿ, ಸಾರ್ವಜನಿಕರು ತಮ್ಮ ಸಲಹೆ ದಾಖಲಿಸಬಹುದು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಸೇವಾ ಪರ್ವ; ಸೇವೆ ಮತ್ತು ಸುಶಾಸನ** ಧ್ಯೇಯದೊಂದಿಗೆ, ಪರಿವರ್ತನೆ ಹಾಗೂ ಪ್ರಗತಿ ಸಾಧನೆಗೆ, ಕೇಂದ್ರದ ಸಂಕಲ್ಪ.
- **ಸರಕು ಮತ್ತು ಸೇವಾ ತೆರಿಗೆ ಪರಿಷ್ಕರಣೆ;** ಹವಾನಿಯಂತ್ರಕ ಹಾಗೂ ಟೆಲಿವಿಷನ್ ಮೇಲಿನ, ತೆರಿಗೆ ಕಡಿತಕ್ಕೆ ಶಿಫಾರಸು.
- **'ಸಖಿ ಒನ್ ಸ್ಟಾಪ್ ಸೆಂಟರ್';** ದೌರ್ಜನ್ಯಕ್ಕೀಡಾದ ಮಹಿಳೆಯರಿಗೆ, ಒಂದೇ ಸೂರಿನಡಿ, ಸಕಾಲಿಕ ನೆರವು.
- **'ಮಿಷನ್ ವಾತ್ಸಲ್ಯ';** ಸಹಾಯವಾಣಿ 1-0-9-8 ಮೂಲಕ, ಸಂಕಷ್ಟದಲ್ಲಿರುವ ಮಕ್ಕಳ ಹಿತರಕ್ಷಣೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>